**(ಇಂದು ದಿನಾಂಕಃ 05–02–2026 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)**

ಮುಖ್ಯ ವಿಚಾರಣೆ ಃ ಶ್ರೀ ಬಿ ಎಂ ಎಸ್ ವಕೀಲರಿಂದ ಃ-

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದ ವಿಷಯ ನಾನೇ ಹೇಳಿ ಬರೆಸಿದ್ದು ಅದು ಸತ್ಯವಾಗಿರುತ್ತದೆ.

ನಾನು ಈಗಾಗಲೇ ಸಲ್ಲಿಸಿದ ದಾಖಲೆಗಳನ್ನು ದಿನಾಂಕ 27-08-2013 ರಂದು ನಿಪಿ-1 ರಿಂದ ನಿಪಿ-5 ಎಂದು ಗುರುತಿಸಲಾಗಿರುತ್ತದೆ. ನಾನು ಅದನ್ನೇ ಅನುಸರಿಸುತ್ತೇನೆ. ಆದಕಾರಣ ದಾವೆಯನ್ನು ಪುರಸ್ಕರಿಸಬೇಕಾಗಿ ವಿನಂತಿ.

ಪಾಟೀಸವಾಲು ಃ ಶ್ರೀ ವಿ ಟಿ ಕೆ ವಕೀಲರಿಂದ ಃ -

1) ದಾವಾ ಆಸ್ತಿಯು 1 ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದು ನನ್ನ ತಾಯಿಯ ಆಸ್ತಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ನನ್ನ ತಾಯಿಗೆ ಆಸ್ತಿ ಹೇಗೆ ಬಂದಿದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ದಾವಾ ಜಮೀನು ಈ ಮೊದಲು ಕಾಳಗಿ ರವರಿಗೆ ಸೇರಿದ್ದು ಇರುತ್ತದೆ ಎಂದರೆ ಸರಿ. ಸದರಿ ಆಸ್ತಿಯ ಸಂಬಂದ ದಿನಾಂಕ 07-05-1964 ರಲ್ಲಿ 1 ನೇ ಪ್ರತಿವಾದಿಯು ಖರೀದಿ ಹಿಡಿದಿರುತ್ತಾನೆ ಎಂದರೆ ಸರಿ. ಖರೀದಿಯ ನಂತರ ಆತನ ಹೆಸರು ದಾಖಲೆಗಳಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆಗ ನಾನು ಜನಿಸಿರಲಿಲ್ಲ.

2) ವಿಪಿಸಿ ಸಂಖ್ಯೆ 193 ಈ ಮೊದಲು ತೋಟಪ್ಪ ನಾಗತಾಣ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ. ಸದರಿ ದಾಖಲೆಯನ್ನು ನಾನು ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ತೋಟಪ್ಪ ರವರಿಗೆ ಬಸವಲಿಂಗಪ್ಪ, ವೀರಪ್ಪ ಹಾಗೂ ಶಿವಲಿಂಗಪ್ಪ 3 ಜನ ಮಕ್ಕಳು ಎಂದರೆ ಸರಿ. ಬಸವಲಿಂಗಪ್ಪ ಮತ್ತು ಶಿವಲಿಂಗಪ್ಪ ರವರು ಮರಣ ಹೊಂದಿರುತ್ತಾರೆ ಎಂದರೆ ಸರಿ. ಬಸವಲಿಂಗಪ್ಪ ರವರಿಗೆ ದ್ರಾಕ್ಷಾಯನಮ್ಮ ಹಾಗೂ ಶಿವಗಂಗಮ್ಮ ಎನ್ನುವ ಮಕ್ಕಳು ಎಂದರೆ ಸರಿ. ಶಿವಲಿಂಗಪ್ಪ ರವರಿಗೆ 3 ಜನ ಹೆಣ್ಣುಮಕ್ಕಳು ಹಾಗೂ ಒಬ್ಬ ಗಂಡು ಮಗನಿರುತ್ತಾನೆ. ಸದರಿಯವರನ್ನು ದಾವೆಯಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ.

3) ನನ್ನ ವಾದ ಪತ್ರದಲ್ಲಿ ಶಿವಲಿಂಗಪ್ಪ, ಬಸವಲಿಂಗಪ್ಪ ರವರ ನಡುವೆ ಏನಾದರೂ ಪಾಲುವಿಭಾಗ ಅಥವಾ ಬೇರೆ ರೀತಿಯ ವ್ಯವಸ್ಥೆ ಆಗಿದೆಯೊ ಇಲ್ಲವೊ ಎನ್ನುವುದರ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಬಸವಲಿಂಗಪ್ಪ, ವೀರಪ್ಪ ಹಾಗೂ ಶಿವಲಿಂಗಪ್ಪ ರವರ ನಡುವೆ

ಏನಾದರೂ ಪಾಲುವಿಭಾಗ ಅಥವಾ ಬೇರೆ ರೀತಿಯ ವ್ಯವಸ್ಥೆ ಆಗಿದೆಯೊ ಇಲ್ಲವೊ ಎನ್ನುವುದರ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿಲ್ಲ.

4) ಸಾಕ್ಷಿಗೆ ಈಗ ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 3 ನೇ ಕಂಡಿಕೆಯ 5 ನೇ ಸಾಲನ್ನು ತೋರಿಸಿ ಅದರಲ್ಲಿ ವಿಪಿಸಿ ಸಂಖ್ಯೆ 183 ನೇದ್ದರಲ್ಲಿ ಪಾಲವಿಭಾಗವಾಗಿ ಪ್ರತ್ಯಕ ಕಬ್ಜೆಯಲ್ಲಿ ಇದ್ದ ಬಗ್ಗೆ ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಸದರಿ ಆಸ್ತಿಯ ಉತಾರನ್ನು ನಾನು ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ಪಾಲಿನ ಮೌಲ್ಯ ಮಾಪನ ಎಷ್ಟು ಎಂದು ನನಗೆ ಗೊತ್ತಾಗುವುದಿಲ್ಲ. ನನ್ನ ಆಸ್ತಿಯ ಕಿಮ್ಮತ್ತನ್ನು ನಮೂದು ಮಾಡಿಲ್ಲ.

5) ದಾವಾ ಆಸ್ತಿ ಜಮೀನು ಸಣ್ಣೇರಿ ಜಮೀನು ಎಂದರೆ ಸರಿ. ಸದರಿ ಜಮೀನು ಫಲವತ್ತತೆಯ ಜಮೀನು ಎಂದರೆ ಸರಿ. ಸದರಿ ಆಸ್ತಿಯ 1 ಎಕ್ರೆ ಅಂದಾಜು ಮಾರುಕಟ್ಟೆ ಬೆಲೆ 50 ರಿಂದ 60 ಲಕ್ಷ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಹಿಸ್ಸೆಯ ಅಂದಾಜು ಮಾರುಕಟ್ಟೆ ಬೆಲೆ 40 ರಿಂದ 50 ಲಕ್ಷ ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಷಯ ಗೊತ್ತಿದ್ದರು ಸಹ ಗೊತ್ತಿಲ್ಲ ಎಂದು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಜಮೀನು 1 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಅಂದರೆ ಸರಿಯಲ್ಲ.

6) ದಾವಾ ಆಸ್ತಿಗಳಲ್ಲಿ ನನಗೆ ಯಾವುದೇ ಹಕ್ಕು ವ ಹಿತಾಸಕ್ತಿ ಇರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಅಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳು ಮಾನ್ಯ ನ್ಯಾಯಾಲಯದ ನ್ಯಾಯವ್ಯಾಪ್ತಿಯಲ್ಲಿ ಬರುವುದಿಲ್ಲ ಅಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮತ್ತೆ 4 ಜನ ತಮ್ಮಂದಿರು ಇರುತ್ತಾರೆ.

ಮರು ವಿಚಾರಣೆ ಃ ಇಲ್ಲಾ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**